ನಿಮ್ಮೊಡನೆ

# ಅಭಿಮಾನದ ಅತಿರೇಕ ಸಲ್ಲದು

ಆದಾಯ ತೆರಿಗೆ ದಾಳಿಯಿಂದಾಗಿ, ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ವೃತ್ತಿಪರತೆ ಎರಡನ್ನೂ ರೂಢಿಸಿಕೊಳ್ಳಲು ಈ ಹೀರೋಗಳು, ನಿರ್ಮಾಪಕರಿಗೆ ಪ್ರೇರಣೆ ದೊರಕಿದರೆ ಅದು ಇನ್ನೂ ಒಳ್ಳೆಯದು.

ಸಿನಿಮಾ ಎನ್ನುವುದು ಈಗ ಕನಸುಗಳನ್ನು ಬಿತ್ತುವ ಉದ್ಯಮ. ಆದರೆ ಭ್ರಮಾತ್ಮಕ ವಾಸ್ತವ. ವಾಸ್ತವದ ನೆಲೆಗಟ್ಟಿನಲ್ಲಿ ಬುದ್ಧಿಪೂರ್ವಕವಾಗಿ ನೇರ ಸಿನಿಮಾಗಳನ್ನು ನಿರ್ಮಿಸುವವರು ಈಗಲೂ ಇದ್ದಾರೆ, ಇಲ್ಲವೆಂದಲ್ಲ. ಆದರೆ ಅವರ ಸಂಖ್ಯೆ ಕಡಿಮೆ. ಅವರಿಗೆ ಬಂಡವಾಳ ಒದಗಿಸುವವರೂ ಕಡಿಮೆಯೇ. ಆದರೆ ಇವತ್ತಿನ ಬಹುತೇಕ ಸಿನಿಮಾಗಳನ್ನು ವಾಣಿಜ್ಯೋದ್ದೇಶದ ಮನರಂಜನೆಯ ಸರಕು ಎಂದೇ ಪರಿಗಣಿಸಬಹುದು. ಬಹುತೇಕ ಸಿನಿಮಾಗಳು ಸವಕಲು ಕಥೆಗಳನ್ನೇ ಹೊಂದಿರುತ್ತವೆ. ಹಾಗಾಗಿ ಈ ಸಿನಿಮಾಗಳಿಗೆ ಹೀರೋಯಿಸಂ ಎನ್ನುವುದೇ ಬಹುದೊಡ್ಡ ಆಧಾರ. ತರ್ಕಹೀನ ಘಟನೆಗಳು, ವಾಸ್ತವಕ್ಕೆ ದೂರವಾದ ನಿರೂಪಣೆ, ಮನರಂಜಿಸುವುದೇ ಮುಖ್ಯ ಗುರಿಯಾಗಿರುವ ಸಿನಿಮಾಗಳಲ್ಲಿ ನಟಿಸುವ ಹೀರೋಗಳ ಸುತ್ತ ಒಂದು ಪ್ರಭಾವಳಿ ಬೆಳೆಯುತ್ತದೆ. ಈ ಪ್ರಭಾವಳಿಯ ತಿರುಗಣೆಯಲ್ಲಿ ಸಿಲುಕುವ ಹದಿಹರೆಯದ ಯುವಜನ, ಹೀರೋಗಳ ಅಂಧ ಆರಾಧನೆಗೆ ತೊಡಗುತ್ತಾರೆ. ತಾವು ಆರಾಧಿಸುತ್ತಿರುವ ಹೀರೋ ಸರ್ವಸಂಗ ಪರಿತ್ಯಾಗಿ ಎಂದೋ ಸರ್ವಶಕ್ತ ಪ್ರಭಾವಿ ಎಂದೋ ಈ ಅಭಿಮಾನಿಗಳು ಭಾವಿಸುತ್ತಾರೆ. ಅಭಿಮಾನಿಗಳಲ್ಲೂ ಎರಡು ಗುಂಪುಗಳಿವೆ. ಒಂದು ಅಂಧ ಭಕ್ತರದ್ದು; ಇನ್ನೊಂದು ಸಿನಿಮಾದ ನಟನೆಯಿಂದ ಪ್ರಭಾವಿತರಾಗುವ ಸಹಜ ಅಭಿಮಾನಿಗಳದ್ದು. ಎರಡನೆಯ ಗುಂಪಿನ ಅಭಿಮಾನಿಗಳನ್ನು ಸಹಿಸಿಕೊಳ್ಳಬಹುದು. ಆದರೆ ಮೊದಲ ಗುಂಪಿನ ಅಭಿಮಾನಿಗಳ ಕುರಿತು ಸಮಾಜದಲ್ಲಿ ಎಚ್ಚರಿಕೆ ಮೂಡಿಸುವ ಅಗತ್ಯವಿದೆ.

ಇತ್ತೀಚೆಗೆ ನಡೆದ ಎರಡು ಘಟನೆಗಳನ್ನು ಗಮನಿಸಿ: ಮೊದಲನೆಯದ್ದು ಕನ್ನಡದ ಹಲವು ಹೀರೋಗಳು ಮತ್ತು ನಿರ್ಮಾಪಕರ ಮನೆಯ ಮೇಲೆ ನಡೆದ ಆದಾಯ ತೆರಿಗೆ ದಾಳಿ. ಆದಾಯ ತೆರಿಗೆ ಇಲಾಖೆಯವರು ಸಾಕಷ್ಟು ಹೋಮ್‌ವರ್ಕ್ ನಡೆಸಿ, ಹಲವು ದಾಖಲೆಗಳನ್ನು ಗಮನಿಸಿಯೇ ದಾಳಿ ನಡೆಸುತ್ತಾರೆ. ಆದರೆ ಅಭಿಮಾನಿಗಳಿಗೆ ಈ ದಾಳಿಯಿಂದ ತೀವ್ರ ಕಸಿವಿಸಿ, ಆಕ್ರೋಶ! ತಾವು ಮೆಚ್ಚಿದ ಹೀರೋ, ಹಲವಾರು ಸಿನಿಮಾಗಳಲ್ಲಿ ಸತ್ಯಸಂಧ ನಾಯಕನ ಪಾತ್ರ ವಹಿಸಿರುವುದರಿಂದ ನಿಜಜೀವನದಲ್ಲಿ ತಪ್ಪು ಮಾಡುವುದೇ ಇಲ್ಲ ಎನ್ನುವ ಅಂಧಾಭಿಮಾನ ಅವರದ್ದು. ತೆರಿಗೆ ದಾಳಿಯನ್ನು ಹಲವರು ಖಂಡಿಸಿದರು. ಕೆಲವು ಹೀರೋಗಳೇ ಅಭಿಮಾನಿಗಳನ್ನು ಸಂತೈಸಬೇಕಾಯಿತು. ‘ಅಧಿಕಾರಿಗಳು ಅವರ ಕೆಲಸ ಮಾಡಿದ್ದಾರೆ. ಅವರಿಗೆ ಸಹಕಾರ ಕೊಡುವುದು ನಮ್ಮ ಕರ್ತವ್ಯ. ಅಭಿಮಾನಿಗಳು ಆಕ್ರೋಶಕ್ಕೆ ಒಳಗಾಗಬಾರದು’ ಎಂದು ಕೆಲವರು ಮನವಿಯನ್ನೂ ಮಾಡಿದರು.

ಇವತ್ತು ಸಿನಿಮಾ ಎನ್ನುವುದು ಕೋಟ್ಯಂತರ ರೂಪಾಯಿಗಳ ವಹಿವಾಟು ಆಗಿರುವುದರಿಂದ ಅಲ್ಲಿ ತೆರಿಗೆ ವಂಚನೆಯ ಪ್ರಮಾಣವೂ ದೊಡ್ಡದಾಗಿದೆ. ಆದಾಯಕ್ಕೆ ತಕ್ಕಂತೆ ತೆರಿಗೆ ಕಟ್ಟಿ, ಲೆಕ್ಕಪತ್ರಗಳನ್ನು ಹೆಚ್ಚು ವ್ಯವಸ್ಥಿತವಾಗಿ ಇಟ್ಟುಕೊಳ್ಳುವ ವೃತ್ತಿಪರತೆ ಕನ್ನಡ ಚಿತ್ರರಂಗದಲ್ಲಿ ಕಡಿಮೆಯೇ. ಗಾಂಧಿನಗರದ ಗಣ್ಯರ ಮನೆಯ ಮೇಲೆ ನಡೆದ ದಾಳಿಗಳಲ್ಲಿ 100 ಕೋಟಿ ರೂಪಾಯಿಗೂ ಮಿಕ್ಕಿದ ತೆರಿಗೆ ವಂಚನೆಯ ಸುಳಿವು ಸಿಕ್ಕಿದೆ ಎನ್ನುವುದೂ ಇದನ್ನೇ ಸ್ಪಷ್ಟಪಡಿಸಿದೆ. ತಮ್ಮ ಮೆಚ್ಚಿನ ಹೀರೋಗಳೂ ಮನುಷ್ಯಸಹಜ ವಾಂಛೆಗಳಿಂದ ಹೊರತಾಗಿಲ್ಲ ಎನ್ನುವ ಅರಿವು ಅಭಿಮಾನಿಗಳಿಗೆ ಇರಬೇಕು. ಆದಾಯ ತೆರಿಗೆ ದಾಳಿಯಿಂದಾಗಿ, ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ವೃತ್ತಿಪರತೆ ಎರಡನ್ನೂ ರೂಢಿಸಿಕೊಳ್ಳಲು ಈ ಹೀರೋಗಳು, ನಿರ್ಮಾಪಕರಿಗೆ ಪ್ರೇರಣೆ ದೊರಕಿದರೆ ಅದು ಇನ್ನೂ ಒಳ್ಳೆಯದು.

ಎರಡನೆಯ ಸಂಗತಿ, ಚಿತ್ರನಟ ಯಶ್ ಅಭಿಮಾನಿಯೊಬ್ಬ ಆತ್ಮಹತ್ಯೆ ಮಾಡಿಕೊಂಡದ್ದು. ಯಶ್ ಇವತ್ತು ಕನ್ನಡದ ಅತ್ಯಂತ ಜನಪ್ರಿಯ ನಟ. ಆತ ನಟಿಸಿದ ‘ಕೆಜಿಎಫ್’ ಚಿತ್ರ ಆದಾಯ ಸಂಗ್ರಹದಲ್ಲಿ ದಾಖಲೆ ನಡೆಸಿ, ಕನ್ನಡ ಚಿತ್ರರಂಗವೂ ದೇಶದ ಇತರ ಭಾಷೆಗಳ ಕಮರ್ಷಿಯಲ್ ಸಿನಿಮಾಗಳ ಜೊತೆಗೆ ಸ್ಪರ್ಧಿಸಿ ಗೆಲ್ಲುವ ಸಾಮರ್ಥ್ಯ ಹೊಂದಿದೆ ಎನ್ನುವುದನ್ನು ಸಾಬೀತುಪಡಿಸಿದೆ. ತನ್ನ ಮೆಚ್ಚಿನ ಈ ನಟ ಈ ಸಲ ಹುಟ್ಟುಹಬ್ಬವನ್ನು ಆಚರಿಸುತ್ತಿಲ್ಲ ಎನ್ನುವ ಕಾರಣಕ್ಕಾಗಿ ಅಭಿಮಾನಿಯೊಬ್ಬ ಆತ್ಮಹತ್ಯೆಯ ಯತ್ನ ನಡೆಸಿ, ಕೊನೆಗೆ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದು ನಿಜಕ್ಕೂ ದುಃಖಕರ ವಿಷಯ. ಇಂತಹ ಅತಿರೇಕದ ಅಭಿಮಾನ ಬೆಳೆಯದಂತೆ ನಮ್ಮ ಹೀರೋಗಳು ಆಗಾಗ್ಗೆ ಎಚ್ಚರಿಕೆ ನೀಡುವುದು ಒಳ್ಳೆಯದು. ಸ್ವತಃ ಯಶ್ ಈ ಬಗ್ಗೆ ತೀವ್ರ ಕಸಿವಿಸಿ ವ್ಯಕ್ತಪಡಿಸಿದ್ದಾರೆ. ಅಭಿಮಾನದ ಹೆಸರಲ್ಲಿ ರಕ್ತದಾನ, ಸಮಾಜಸೇವೆಗಳಲ್ಲಿ ತೊಡಗಿದರೆ ಅದರಿಂದ ಸಮಾಜಕ್ಕೂ ಒಳ್ಳೆಯದು. ಅದು ಬಿಟ್ಟು ಜೀವ ಕಳೆದುಕೊಳ್ಳುವುದು ಅಕ್ಷಮ್ಯ.

■ ಬಿ.ಎಂ. ಹನೀಫ್



ಈಶ್ವರ